ಅನುದಾನದಲ್ಲಿ ಕೈಗೊಳ್ಳಲಾಗುತ್ತಿದೆ. ರಾಜ್ಯದ ಈ ಶೇ.20ರ ಅನುದಾನದಲ್ಲಿ ಫಲಾನುಭವಿಗಳು ಶೇ.10 ರಷ್ಟರ ಮೊತ್ತವನ್ನು ಭರಿಸಬೇಕಾಗಿರುತ್ತದೆ.

ಆ) ಹೌದು. ಈ ಯೋಜನೆಯಡಿಯಲ್ಲಿ ಹುಣಸೂರು ಪಟ್ಟಣದಲ್ಲಿ ಈ ಕೆಳಕಂಡ 5 ಕೊಳಚೆ ಪ್ರದೇಶಗಳಲ್ಲಿ ಮನೆಗಳ ನಿರ್ಮಾಣ ಹಾಗೂ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ.

ಕ್ರಮ ಸಂಖ್ಯೆ	ಕೊಳಚೆ ಪ್ರದೇಶದ ಹೆಸರು
1	ಶಿವಜ್ಯೋತಿ ನಗರ
2	ಸದಾಶಿವನಕೊಪ್ಪಲು
3	ಪಿ.ಕೆ.ಕಾಲೋನಿ
4	ನರಸಿಂಹಸ್ವಾಮಿತಿಟ್ಟು
5	ರತ್ನಪುರಿ ಬಡಾವಣೆ

ಇ) ಈ ಯೋಜನೆಯಡಿ ಒಟ್ಟು 321 ಮನೆಗಳ ನಿರ್ಮಾಣ ಹಾಗೂ ಮೂಲಭೂತ ಸೌಲಭ್ಯ ಕಾಮಗಾರಿಗಳನ್ನು ಕೈಗೊಳ್ಳಲು ರೂ.856.00 ಲಕ್ಷಗಳ ಯೋಜನಾ ವರದಿಯನ್ನು ತಯಾರಿಸಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಈ) ಕೇಂದ್ರ ಸರ್ಕಾರದಿಂದ ಮಂಜೂರಾತಿ ದೊರೆತ ಕೂಡಲೇ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗುವುದು.

592 ಶ್ರೀ.ಸೋಮಲಿಂಗಪ್ಪ ಎಂ.ಎಸ್.(ಸಿರಗುಪ್ಪ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೇಲೂರು–ರಾರಾವಿ–ಸಿರಗುಪ್ಪ ರಾಜ್ಯ ಹೆದ್ದಾರಿಯ ರಾರಾವಿ ಬಳಿ ಇರುವ ಸೇತುವೆಯು ಇತ್ತೀಚೆಗೆ ಸುರಿದ ಭಾರಿ ಮಳೆಯಿಂದಾಗಿ ಸಂಪೂರ್ಣ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಸೇತುವೆಯನ್ನು ಯಾವಾಗ ನಿರ್ಮಿಸಲಾಯಿತು.

ಇ) ಈ ಸೇತುವೆಯನ್ನು ಪುನರ್ ನಿರ್ಮಾಣ ಮಾಡುವ ಅವಶ್ಯಕತೆ ಇದ್ದು, ಇದಕ್ಕಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಬಂದಿದೆ.

ಆ) 1970 ರಲ್ಲಿ ನಿರ್ಮಿಸಲಾಗಿದೆ.

ಇ) ನೆರೆಪರಿಹಾರ ನಿಧಿಯ ಯೋಜನೆಯಡಿ ಈಗಾಗಲೇ ತುರ್ತು ದುರಸ್ತಿ ಕಾರ್ಯಗಳನ್ನು ಕೈಗೊಳ್ಳಲಾಗಿದೆ. ಅನುದಾನ ಲಭ್ಯತೆಯ ಆಧಾರದ ಮೇಲೆ ಕೈಗೆತ್ತಿಕೊಳ್ಳಲಾಗುವುದು.

490 ಶ್ರೀ ಆನಂದ ಸಿಂಗ್ (ವಿಜಯನಗರ–ಬಳ್ಳಾರಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಈಗಾಗಲೇ ಕೊಳಚೆ ಪ್ರದೇಶಗಳೆಂದು ಘೋಷಿಸಲ್ಪಟ್ಟ ನಗರಗಳಲ್ಲಿ ಘೋಷಿಸಲು ಬಾಕಿ ಇರುವ ಕೊಳಚೆ ಪ್ರದೇಶಗಳೆಷ್ಟು;

ಆ) ಈ ಹಿಂದೆ ಯಾವ ವರ್ಷ ಘೋಷಿಸಲಾಗಿತ್ತು.

ಇ) ಯಾವ ಕಾರಣದಿಂದ ಘೋಷಣೆ ವಿಳಂಬವಾಗಿದೆ;

ಈ) ಘೋಷಿಸಲಾದ ಕೊಳಚೆ ಪ್ರದೇಶಗಳಲ್ಲಿ ಅಭಿವೃದ್ಧಿ ಪರ ಯಾವ ಯಾವ ಕಾರ್ಯ ಕೈಗೊಳ್ಳಲಾಗಿದೆ?

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯ ಮಂತ್ರಿಯವರು) :

ಅ) ವಿವಿಧ ನಗರ/ಪಟ್ಟಣಗಳಲ್ಲಿ 153 ಕೊಳಚೆ ಪ್ರದೇಶಗಳನ್ನು ಗುರುತಿಸಿದ್ದು, ಮಂಡಳಿ ಕಾಯ್ದೆಯಡಿ ಘೋಷಣೆಗೆ ಬಾಕಿ ಇರುತ್ತದೆ. ಘೋಷಣೆಗೆ ಬಾಕಿ ಇರುವ ಕೊಳಚೆ ಪ್ರದೇಶಗಳ ಸಂಖ್ಯೆಗಳ ವಿವರ ಈ ಕೆಳಕಂಡಂತಿವೆ:–

ಕ್ರ. ಸಂ.	ನಗರ/ಪಟ್ಟಣ	ಘೋಷಣೆಗೆ ಬಾಕಿ ಇರುವ ಕೊಳಚೆ ಪ್ರದೇಶಗಳ ಸಂಖ್ಯೆ
1	ಬೆಂಗಳೂರು	9
2	ಹೊಸಪೇಟೆ	26
3	ಶಿರಗುಪ್ಪ	5